## ಕರ್ನಾಟಕ ಲೋಕಾಯುಕ್ತ

**ಪ್ರಕರಣ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\358\2014\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:26/05/2017

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀ.ಬಿ.ಎಂ.ಯಶಸ್ ಬಿನ್ ಬಿ.ಪಿ.ಮಹೇಶ್, #810, 13ನೇ ಮುಖ್ಯ ರಸ್ತೆ, 14ನೇ ಕ್ರಾಸ್, ಎ-ಸೆಕ್ಟರ್, ಯಲಹಂಕ ನ್ಯೂ ಟೌನ್, ಬೆಂಗಳೂರು ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಬೆಂಗಳೂರು ನಗರ ಜಿಲ್ಲೆ ಯಲಹಂಕ ನ್ಯೂ ಟೌನ್ ಎ-ಸೆಕ್ಟರ್ 14ನೇ ಕ್ರಾಸ್, 13ನೇ ಮುಖ್ಯ ರಸ್ತೆ, ನಂ.810ರ ನಿವಾಸಿಯಾದ ಶ್ರೀ.ಬಿ.ಎಂ.ಯಶಸ್ ಬಿನ ಬಿ.ಪಿ.ಮಹೇಶ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ 1) ಉಪ ನಿರ್ದೇಶಕರಾದ ಶ್ರೀ.ಸಿದ್ದನಂಜಯ್ಯ, 2) ಹಿರಿಯ ಭೂ ವಿಜ್ಞಾನಿಯಾದ ಶ್ರೀ.ಕೊಟ್ರೇಶ್ ಮತ್ತು 3)ಕಿರಿಯ ಅಭಿಯಂತರರಾದ ಶ್ರೀ.ಎಸ್.ಜಿ.ಗಂಗಾಧರಯ್ಯ (ಇನ್ನು ಮುಂದೆ "1 ರಿಂದ 3ನೇ ಎದುರುದಾರ" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಮತ್ತು ತಾಲ್ಲೂಕ್ ಹಾಲುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.114ರಲ್ಲಿ ಕಂದಾಯ ಇಲಾಖೆಯ ದಾಖಲಾತಿಗಳ ಪ್ರಕಾರ 86 ಎಕರೆ ಗೋಮಾಳ ಪ್ರದೇಶವಿದ್ದು, ಆ ಪೈಕಿ ಸುಮಾರು 15 ಎಕರೆ ಕಲ್ಲು ಬಂಡೆಯಿಂದ ಆವೃತವಾಗಿವೆ. ಆ ಆಸ್ತಿಯಲ್ಲಿ ಕೆಲವು ಜನರು ಅನಧಿಕೃತವಾಗಿ ಎದುರುದಾರರ ಜೊತೆ ಷಾಮೀಲಾಗಿ, ಕಳೆದ ಆರೇಳು ವರ್ಷಗಳಿಂದ ಕಲ್ಲು ಗಣಿಗಾರಿಕೆಯನ್ನು ಯಾವುದೇ ಅನುಮತಿಯಿಲ್ಲದೇ ಹಾಗೂ ರಾಜಸ್ವ ಧನ ಪಾವತಿಸದೇ ನಡೆಸುತ್ತಿದ್ದಾರೆ. ಈ ಸಂಬಂಧವಾಗಿ ಹಲವಾರು ಬಾರಿ ಎದುರುದಾರರಿಗೆ ಮೌಖಿಕವಾಗಿ ಮತ್ತು ಲಿಖಿತವಾಗಿ ದೂರು ನೀಡಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ತುಮಕೂರು (ಇನ್ನು ಮುಂದೆ, 'ತನಿಖಾಧಿಕಾರಿಗಳು-1' ಎಂದು ಕರೆಯಲ್ಪಡುತ್ತಾರೆ) ರವರಿಗೆ ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ –

ಹಾಲುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.114ರ ಪ್ರದೇಶವು ತುಮಕೂರು ಹಾಗೂ ಕೊರಟಗೆರೆ ಗಡಿ ಭಾಗದಲ್ಲಿದೆ. ಅದೇ ರೀತಿ, ಕೊರಟಗೆರೆ ತಾಲ್ಲೂಕಿನ ಕಂತೇ ವಡೇರಹಳ್ಳಿ ಸರ್ವೆ ನಂ.16 ಹಾಗೂ ಹಾಲುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.114ರ ಪ್ರದೇಶ ಹೊಂದಿಕೊಂಡಂತಿದೆ. ಸರ್ವೆ ನಂ.114ರಲ್ಲಿ ಗಣಿಗಾರಿಕೆ ಮಾಡುತ್ತಿರುವವರ ಹೆಸರು, ಶ್ರೀ.ಕೆ.ವಿ.ಶಿವರುದ್ರಪ್ಪ, ಶ್ರೀ.ಬಿ.ಪಿ.ಗಿರೀಶ್, ಶ್ರೀ.ಕೆ.ಎಂ.ವೀರಭದ್ರಯ್ಯ, ಶ್ರೀ.ಆರ್.ನಟರಾಜು ಮತ್ತು ಶ್ರೀ.ಎಂ.ರಘು ರವರುಗಳಾಗಿದ್ದು, ಶ್ರೀ.ಕೆ.ವಿ.ಶಿವರುದ್ರಪ್ಪ, ಶ್ರೀ.ಬಿ.ಪಿ.ಗಿರೀಶ್, ಶ್ರೀ.ಕೆ.ಎಂ.ವೀರಭದ್ರಯ್ಯ ರವರುಗಳು ರಾಜಧನ ಹಾಗೂ ಇತರೆ ಶುಲ್ಕ ಪಾವತಿಸದ ಹಾಗೂ ಕಲ್ಲು ಗಣಿ ಗುತ್ತಿಗೆಗಳ ನಿಯಮಗಳನ್ನು ಉಲ್ಲಂಘಿಸಿದ ಕಾರಣ, ಗುತ್ತಿಗೆಗಳನ್ನು ರದ್ದುಪಡಿಸಲಾಗಿದೆ. ಅಲ್ಲದೇ, ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ನೋಟೀಸ್ ನೀಡಲಾಗಿದೆ. ನಂತರ, ಸದರಿ ಪರವಾನಗಿಯ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಅದೇ ರೀತಿ, ಕೆಲವು ಅನಧಿಕೃತವಾಗಿ ನವೀಕರಣಕ್ಕಾಗಿ ಅರ್ಜಿ ಸಲ್ಲಿಸದೇ ಕಲ್ಲು ಗಣಿಗಾರಿಕೆ ನಡೆಸುತ್ತಿರುವವರ ಬಗ್ಗೆ ನೋಟೀಸ್ ನೀಡಿದ್ದು, ಕಲ್ಲು ಗಣಿ ಗುತ್ತಿಗೆ ಸಂ:223 ಮತ್ತು 214ರ 6 ಎಕರೆ 20 ಗುಂಟೆ ಮತ್ತು 1 ಎಕರೆ ಪ್ರದೇಶಗಳಿಗೆ ಎರಡು ಬಾರಿ 8ಎ ಅನ್ವಯ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಗೊಂಡಿದೆ. ಈ ಬಗ್ಗೆ 10 ಅರ್ಜಿಗಳನ್ನು ಸ್ವೀಕರಿಸಿದ್ದು, ಅಧಿಸೂಚನೆಯಲ್ಲಿ ಲೋಪದೋಷಗಳು ಇವೆಯೆಂದು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರಿಂದ, ಸದರಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ದಿ:29/12/12ರಂದು ಅರ್ಜಿ ಸಲ್ಲಿಸಿದ ದೂರುದಾರರ ಅರ್ಜಿಗಳನ್ನು ಪರಿಗಣಿಸದಿರುವ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರಲ್ಲಿ ರಿಟ್ ಅರ್ಜಿ ಸಂ:28221/ 2013ರಂತೆ ಪ್ರಕರಣ ದಾಖಲಿಸಿರುತ್ತಾರೆ. ಅದರಂತೆ, ನ್ಯಾಯಾಲಯವು ಗುತ್ತಿಗೆ ಮಂಜೂರಾತಿ ಮಾಡುವಲ್ಲಿ ನ್ಯೂನತೆಗಳಿದ್ದು, ಅವುಗಳನ್ನು ಸರಿಪಡಿಸಿ, ಪುನಃ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶವಾಗಿದೆ. ಅನಧಿಕೃತವಾಗಿ ಗಣಿಗಾರಿಕೆ ನಡೆಸುವ ಬಗ್ಗೆ ಮಾಹಿತಿ ಬಂದ ನಂತರ ಸದರಿ ಅರ್ಜಿಗಳನ್ನು ವಜಾಗೊಳಿಸಿ, ಕ್ರಮ ಕೈಗೊಳ್ಳಲಾಗುವುದೆಂದು ನೋಟೀಸ್ ಜಾರಿ ಮಾಡಲಾಗಿದೆ. ದೂರುದಾರರ ಸಮ್ಮುಖದಲ್ಲಿ ಸರ್ವೆ ನಂ.114ರಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಗಣಿಗಾರಿಕೆಗಳನ್ನು ಪರಿಶೀಲಿಸಿ, ಕಟ್ಟಡ ಕಲ್ಲನ್ನು ತುಂಬಿಕೊಂಡು ಹೋಗುತ್ತಿದ್ದ ವಾಹನಗಳನ್ನು ವಶಪಡಿಸಿಕೊಂಡು ಸದರಿ ಟ್ರ್ಯಾಕ್ಟರ್ ಮತ್ತು ಅದರ ಮಾಲೀಕರ ವಿರುದ್ಧ ಕ್ಯಾತಸಂದ್ರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆಯೆಂದು ಹೇಳಿದ್ದಾರೆ. ಆದರೆ, ಪೂರಕವಾದ ದಾಖಲೆಗಳಿರುವುದಿಲ್ಲ.

4. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು (ಇನ್ನು ಮುಂದೆ, 'ತನಿಖಾಧಿಕಾರಿಗಳು-2' ಎಂದು ಕರೆಯಲ್ಪಡುತ್ತಾರೆ) ರವರಿಗೆ ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ –

ಹಾಲುಗೊಂಡನಹಳ್ಳಿ ಸರ್ವೆ ನಂ.114ರಲ್ಲಿ ಗಣಿಗಾರಿಕೆ ಮಾಡುತ್ತಿರುವವರ ಹೆಸರು, ಶ್ರೀ.ಕೆ.ವಿ.ಶಿವರುದ್ರಪ್ಪ, ಶ್ರೀ.ಬಿ.ಪಿ.ಗಿರೀಶ್, ಶ್ರೀ.ಕೆ.ಎಂ.ವೀರಭದ್ರಯ್ಯ, ಶ್ರೀ.ಆರ್.ನಟರಾಜು ಮತ್ತು ಶ್ರೀ.ಎಂ.ರಘು ರವರುಗಳಾಗಿದ್ದು, ಶ್ರೀ.ಕೆ.ವಿ.ಶಿವರುದ್ರಪ್ಪ, ಶ್ರೀ.ಬಿ.ಪಿ.ಗಿರೀಶ್, ಶ್ರೀ.ಕೆ.ಎಂ.ವೀರಭದ್ರಯ್ಯ ರವರುಗಳು ರಾಜಧನ ಹಾಗೂ ಇತರೆ ಶುಲ್ಕ ಪಾವತಿಸದ ಹಾಗೂ ಕಲ್ಲು ಗಣಿ ಗುತ್ತಿಗೆಗಳ ನಿಯಮಗಳನ್ನು ಉಲ್ಲಂಘಿಸಿದ ಕಾರಣ, ಗುತ್ತಿಗೆಗಳನ್ನು ರದ್ದುಪಡಿಸಲಾಗಿದೆ. ಸದರಿ ಸ್ಥಳದಲ್ಲಿ ಕೆಲವು ವ್ಯಕ್ತಿಗಳು ಅನಧಿಕೃತವಾಗಿ ಕಲ್ಲುಬಂಡೆ ಒಡೆಯುತ್ತಿದ್ದು, ತಮ್ಮನ್ನು ಕಂಡು ಓಡಿ ಹೋಗಿದ್ದು, ಉಳಿದಂತೆ ಸ್ಥಳದಲ್ಲಿ ಕಲ್ಲು ಗಣಿಗಾರಿಕೆ ಸಂ:774ರಲ್ಲಿ ಹಾಜರಿದ್ದ ಗುತ್ತಿಗೆ ಅವಧಿ ನವೀಕರಣ ಮಾಡಿಸಿಕೊಂಡು ಕೆಲಸ ನಿರ್ವಹಿಸುತ್ತಿದ್ದು, ಅದೇ ರೀತಿ, ಆ ಸ್ಥಳದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೂಲಿ ಕಾರ್ಮಿಕರನ್ನು ಸಹ ವಿಚಾರಣೆ ಮಾಡಲಾಗಿದೆ. ಸದರಿ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದ, 2 ಲಾರಿ ಹಾಗೂ 1 ಟ್ರ್ಯಾಕ್ಟರನ್ನು ಜಪ್ತು ಮಾಡಿ, ಸದರಿ ವಾಹನಗಳು ಮತ್ತು ಮಾಲೀಕರ ವಿರುದ್ಧ ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂ:100/2014ರಂತೆ ಪ್ರಕರಣ ದಾಖಲಾಗಿದೆ. ಅದೇ ರೀತಿ, ಗುತ್ತಿಗೆದಾರರ ಪೈಕಿ ಶ್ರೀ.ವೀರಭದ್ರಯ್ಯ ಹಾಗೂ ಇತರರು ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವುದು ಕಂಡು ಬಂದಿದೆ. ದೂರುದಾರರಿಗೆ ಸಂಬಂಧಪಟ್ಟಂತೆ, ಕಲ್ಲು ಗಣಿಗಾರಿಕೆಗೆ ಅರ್ಜಿ ಸಲ್ಲಿಸಿದ ಅರ್ಜಿಯನ್ನು ಎದುರುದಾರರು ಪರಿಗಣಿಸದೇ ಇರುವುದರಿಂದ, ಸದರಿ ದೂರನ್ನು ಸಲ್ಲಿಸಿದ್ದಾರೆ. ಆದರೆ, ದೂರುದಾರರು ಆರೋಪಿಸಿರುವ ಅಂಶಗಳ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಸದರಿ ಕಲ್ಲು ಗಣಿಗಾರಿಕೆಯಲ್ಲಿ ನಡೆಯುತ್ತಿರುವ ಅನಧಿಕೃತ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವಲ್ಲಿ ವಿಫಲಗೊಂಡಿದ್ದು, ವಿಚಾರಣೆಯಿಂದ ತಿಳಿದು ಬಂದಿದೆಯೆಂದು ಹೇಳಿದ್ದಾರೆ.

5. ದೂರು ಮತ್ತು ತನಿಖಾಧಿಕಾರಿಗಳ ವರದಿಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಹಾಲುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.114ರಲ್ಲಿ ಗಣಿಗಾರಿಕೆ ಮಾಡುತ್ತಿರುವ ಶ್ರೀ.ಕೆ.ವಿ.ಶಿವರುದ್ರಪ್ಪ, ಶ್ರೀ.ಬಿ.ಪಿ.ಗಿರೀಶ್, ಶ್ರೀ.ಕೆ.ಎಂ.ವೀರಭದ್ರಯ್ಯ, ಶ್ರೀ.ಆರ್.ನಟರಾಜು ಮತ್ತು ಶ್ರೀ.ಎಂ.ರಘು ರವರುಗಳಾಗಿದ್ದು, ಶ್ರೀ.ಕೆ.ವಿ.ಶಿವರುದ್ರಪ್ಪ, ಶ್ರೀ.ಬಿ.ಪಿ.ಗಿರೀಶ್, ಶ್ರೀ.ಕೆ.ಎಂ.ವೀರಭದ್ರಯ್ಯ ರವರುಗಳು ರಾಜಧನ ಹಾಗೂ ಇತರೆ ಶುಲ್ಕ ಪಾವತಿಸದ ಹಾಗೂ ಕಲ್ಲು ಗಣಿ ಗುತ್ತಿಗೆಗಳ

ನಿಯಮಗಳನ್ನು ಉಲ್ಲಂಘಿಸಿದ ಕಾರಣ, ಗುತ್ತಿಗೆಗಳನ್ನು ರದ್ದುಪಡಿಸಲಾಗಿದೆ. ನಂತರ, ಸದರಿ ಪರವಾನಗಿಯ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಅದೇ ರೀತಿ, ಕೆಲವು ಅನಧಿಕೃತವಾಗಿ ನವೀಕರಣಕ್ಕಾಗಿ ಅರ್ಜಿ ಸಲ್ಲಿಸದೇ ಕಲ್ಲು ಗಣಿಗಾರಿಕೆ ನಡೆಸುತ್ತಿರುವವರ ಬಗ್ಗೆ ನೋಟೀಸ್ ನೀಡಿದ್ದು, ಕಲ್ಲು ಗಣಿ ಗುತ್ತಿಗೆ ಸಂ:223 ಮತ್ತು 214ರ 6 ಎಕರೆ 20 ಗುಂಟೆ ಮತ್ತು 1 ಎಕರೆ ಪ್ರದೇಶಗಳಿಗೆ ಎರಡು ಬಾರಿ 8ಎ ಅನ್ವಯ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಗೊಂಡಿದೆ. ದಿ:29/12/12ರಂದು ಅರ್ಜಿ ಸಲ್ಲಿಸಿದ ದೂರುದಾರರ ಅರ್ಜಿಗಳನ್ನು ಪರಿಗಣಿಸದಿರುವ ಬಗ್ಗೆ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರಲ್ಲಿ ರಿಟ್ ಅರ್ಜಿ ಸಂ:28221/2013ರಂತೆ ಪ್ರಕರಣ ದಾಖಲಿಸಿದ್ದಾರೆ. ಅದರಂತೆ, ನ್ಯಾಯಾಲಯವು ಗುತ್ತಿಗೆ ಮಂಜೂರಾತಿ ಮಾಡುವಲ್ಲಿ ನ್ಯೂನತೆಗಳಿದ್ದು, ಅವುಗಳನ್ನು ಸರಿಪಡಿಸಿ, ಪುನಃ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶವಾಗಿದೆ. ಅನಧಿಕೃತವಾಗಿ ಗಣಿಗಾರಿಕೆ ನಡೆಸುವ ಬಗ್ಗೆ ಮಾಹಿತಿ ಬಂದ ನಂತರ ಸದರಿ ಅರ್ಜಿಗಳನ್ನು ವಜಾಗೊಳಿಸಿ, ಕ್ರಮ ಕೈಗೊಳ್ಳಲಾಗುವುದೆಂದು ನೋಟೀಸ್ ಜಾರಿ ಮಾಡಲಾಗಿದೆ. ದೂರುದಾರರ ಸಮ್ಮುಖದಲ್ಲಿ ಸರ್ವೆ ನಂ.114ರಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಗಣಿಗಾರಿಕೆಗಳನ್ನು ಪರಿಶೀಲಿಸಿ, ಕಟ್ಟಡ ಕಲ್ಲನ್ನು ತುಂಬಿಕೊಂಡು ಹೋಗುತ್ತಿದ್ದ ವಾಹನಗಳನ್ನು ವಶಪಡಿಸಿಕೊಂಡು ಸದರಿ ಟ್ರ್ಯಾಕ್ಟರ್ ಮತ್ತು ಅದರ ಮಾಲೀಕರ ವಿರುದ್ಧ ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಹಾಲುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.114ರಲ್ಲಿ ಒಟ್ಟು 5 ಗಣಿಗಾರಿಕೆಗಳು ನಡೆಯುತ್ತಿದ್ದು, ಅವುಗಳಲ್ಲಿ 3 ಗಣಿಗಾರಿಕೆಗಳು ನಿಯಮಗಳನ್ನು ಉಲ್ಲಂಘಿಸಿದ್ದರಿಂದ ಅವುಗಳ ಪರವಾನಗಿಯನ್ನು ರದ್ದುಪಡಿಸಲಾಗಿದೆ, ಅದೇ ರೀತಿ ಇಬ್ಬರು ಗುತ್ತಿಗೆದಾರರ ಪರವಾನಗಿ ಮುಕ್ತಾಯಗೊಂಡಿದೆ. 3 ಗುತ್ತಿಗೆದಾರರು ಸದರಿ ಪರವಾನಗಿಯನ್ನು ರದ್ದುಪಡಿಸಿದ್ದರ ವಿರುದ್ಧ ಜಂಟಿ ನಿರ್ದೇಶಕರು, ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ರವರ ಮುಂದೆ ಅರ್ಜಿ ಸಲ್ಲಿಸಿದ್ದು, ಸದರಿಯವರು ತಮ್ಮ ಆದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಸದಂತೆ ನಿರ್ದೇಶನ ನೀಡಿ, ಸಕ್ಷಮ ಪ್ರಾಧಿಕಾರಕ್ಕೆ ಅರ್ಜಿಗಳನ್ನು ವಿಲೇವಾರಿ ಮಾಡಿದ್ದಾರೆ. ಆ ನಂತರ, ಸರ್ಕಾರದ ಸುತ್ತೋಲೆಯಂತೆ ಸರ್ವೆ ನಂ.114ರಲ್ಲಿ ಗುತ್ತಿಗೆ ಅವಧಿ ಮುಗಿದ ಪರವಾನಗಿದಾರರು ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದು, ಆದರೆ ಸದರಿ ಅಧಿಸೂಚನೆಯಲ್ಲಿ ಲೋಪದೋಷಗಳು ಇರುವ ಸಂಬಂಧ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯಕ್ಕೆ ದೂರುದಾರರು ರಿಟ್ ಅರ್ಜಿ ಸಂ:28221/2013ರಂತೆ ಪ್ರಕರಣ ದಾಖಲಿಸಿದ್ದು, ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯವು ಗುತ್ತಿಗೆ ಮಂಜೂರಾತಿ ಮಾಡುವಲ್ಲಿ ನ್ಯೂನತೆಗಳಿದ್ದು, ಅವುಗಳನ್ನು ಸರಿಪಡಿಸಿ ಖಾಲಿ ಇರುವ ಪ್ರದೇಶಕ್ಕೆ 8ಎ ಮೂಲಕ

ಅಧಿಸೂಚನೆ ಮಾಡಿ, ಪುನಃ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದು, ಅದರಂತೆ ಅಧಿಸೂಚನೆಯನ್ನು ಹೊಸದಾಗಿ ಹೊರಡಿಸಿದ್ದು, ಸದರಿ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆಯೆಂದು ಸಾರ್ವಜನಿಕರಿಂದ ದೂರು ಬಂದ ಸಂಬಂಧ ಸ್ಥಳ ಪರಿಶೀಲನೆ ಮಾಡಿ, ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಶ್ರೀ.ವೀರಭದ್ರಯ್ಯ ರವರ ವಿರುದ್ಧ ಮತ್ತು ಆ ಸ್ಥಳದಲ್ಲಿದ್ದ 2 ಲಾರಿ ಮತ್ತು 1 ಟ್ರ್ಯಾಕ್ಟರ್ ವಿರುದ್ಧ ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂ:100/2014ರಂತೆ ಎಂಎಂಆರ್‌ಡಿ ಕಾಯಿದೆ ಅನ್ವಯ ಪ್ರಕರಣ ದಾಖಲಿಸಲಾಗಿದೆ. ಸದರಿ ಪ್ರದೇಶದಲ್ಲಿ ಪ್ರಸ್ತುತವಾಗಿಯೂ ಸಹ ಪರವಾನಗಿ ಮುಕ್ತಾಯಗೊಂಡಿರುವ ಗುತ್ತಿಗೆದಾರರು ಮತ್ತು ಪರವಾನಿಗೆಯಲ್ಲಿ ನಮೂದಿಸಲಾದ ಷರತ್ತುಗಳನ್ನು ಉಲ್ಲಂಘಿಸಿ, ಅನಧಿಕೃತವಾಗಿ ಗಣಿಗಾರಿಕೆ ನಡೆಸುತ್ತಿರುವುದು ಕಂಡು ಬಂದಿದೆ. ಸದರಿ ಪ್ರದೇಶದಲ್ಲಿ ಪರವಾನಗಿ ನವೀಕರಣ ಮಾಡದೇ ಷರತ್ತುಗಳನ್ನು ಉಲ್ಲಂಘಿಸಿ, ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವವರ ವಿರುದ್ಧ ಪ್ರಕರಣ ದಾಖಲಿಸುವುದು ಮತ್ತು ಸದರಿ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವ ಬಗ್ಗೆ ಎದುರುದಾರರು ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿದ್ದಾರೆ.

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಆದ್ದರಿಂದ, ಸದರಿ ಅಕ್ರಮ ಗಣಿಗಾರಿಕೆಯನ್ನು ನಡೆಸುತ್ತಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

27/5/12

(ನ್ಯಾಯಾಮೂರ್ತಿ ಸುಭಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.